ಉಳಿಯುವ ಚಾನ್ಸಿಲ್ಲ, ಕಬ್ಬು ಉಳಿದಿದ್ದರೆ ಪರಿಹಾರ ಕೊಡಬೇಕೆಂಬ ಅವರ ಬೇಡಿಕೆ ಉದ್ಭವಿಸುವುದಿಲ್ಲ ಇರುವ ಕಬ್ಬನ್ನೆಲ್ಲ ಅರೆಯಲಾಗುವುದೆಂದು ತಮ್ಮ ಮೂಲಕ ಸದಸ್ಯರಿಗೆ ತಿಳಿಸುತ್ತೇನೆ.

(ಗೊಂದಲ)

ಅಧ್ಯಕ್ಷರು:- ಇದು ಬಹಳ ಮುಖ್ಯ ಪ್ರಶ್ನೆಯೆಂದು ನನಗನ್ನಿಸುತ್ತಿದೆ. ಇದನ್ನು ಇವತ್ತಿಗೆ ಹೆಲ್ಡ್ ಓವರ್ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನನ್ನ ವಿನಂತಿ ಏನೆಂದರೆ ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಂಡರೆ ಸುಮಾರು 25 ಲಕ್ಷ ಟನ್ ಕಬ್ಬು ಬೆಳೆದಿರುವುದನ್ನು ಬೆಂಕಿ ಹಾಕಿ ಸುಡುವ ಪರಿಸ್ಥಿತಿ ಬಂದಿದೆ. ಇಡೀ ರಾಜ್ಯದಿಂದ ಬೇರೆಬೇರೆ ಭಾಗದ ಮಾಹಿತಿಯನ್ನೂ ಅವರು ತರಲಿ.

ಅಧ್ಯಕ್ಷರು:- ತಮ್ಮ ಸಲಹೆಯಂತೆ, ಇದನ್ನು ಅರ್ಧಗಂಟೆ ಚರ್ಚೆಗೆ ಇಡಲು ಒಪ್ಪಿಕೊಂಡಿದ್ದೇನೆ. ಸೋಮವಾರ ತೆಗೆದುಕೊಳ್ಳೋಣ.

ವಿಷಯ:- ಶಿರಾ ತಾಲ್ಲೂಕಿನಲ್ಲಿ ಚಿನ್ನದ ಅದಿರನ್ನು ತೆಗೆಯುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 74 (418)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಶಿರಾ ತಾಲ್ಲೂಕು ಬುಕ್ಕಾ ಪಟ್ಟಣ ಹೋಬಳಿ ಅಜ್ಜೇನಹಳ್ಳಿ ಗ್ರಾಮದ ಬಳಿಯಲ್ಲಿ ಚಿನ್ನದ ಅದಿರನ್ನು ತೆಗೆಯುತ್ತಿದ್ದು ಸಂಸ್ಕರಣೆಗಾಗಿ ಚಿತ್ರದುರ್ಗಕ್ಕೆ ತೆಗೆದುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಅಜ್ಜೇನಹಳ್ಳಿಯಲ್ಲಿಯೇ ಚಿನ್ನದ ಅದಿರಿನ ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಉದ್ದೇಶವೇನಾದರೂ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

3) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಡಿ.ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು):-

1) ಬಂದಿದೆ.

2) ಸದ್ಯದಲ್ಲಿ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

3) ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಸಂಸ್ಕರಣೆಗಾಗಿ ಚಿತ್ರದುರ್ಗಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ, ಅಜ್ಜೇನಹಳ್ಳಿಯಲ್ಲಿ ಚಿನ್ನ ಸಂಸ್ಕರಣ ಘಟಕ

ತೆರೆಯುವ ಉದ್ದೇಶ ಸರ್ಕಾರಕ್ಕೆ ಸಭ್ಯಕ್ಕಿಲ್ಲ ಎಂದು ಹೇಳಿದ್ದಾರೆ. ಅಜ್ಜೀನಹಳ್ಳಿಯಲ್ಲಿ ಸಿಕ್ಕಿರುವ ಚಿನ್ನದ ನಿಕ್ಷೇಪ ಎಷ್ಟು ಅವಧಿಯಲ್ಲಿ ತೆಗೆಯುವಷ್ಟು ಸಿಕ್ಕಿನೆ ಎಂಬುದು ನಿಮ್ಮ ವರದಿ ಪ್ರಕಾರ ಇದೆ, ಮತ್ತು ಒಂದು ದಿನಕ್ಕೆ ಎಷ್ಟು ತೆಗೆಯುತ್ತಿದ್ದೀರಿ? ಚಿತ್ರದುರ್ಗದ ಇಂಗಳದಾಳದಲ್ಲಿ ಇವತ್ತೇನು ಅಗೆಯುತ್ತಿದ್ದೀರಿ. ಅಲ್ಲಿಗೆ ಎಷ್ಟು ಸರಬರಾಜು ಮಾಡುತ್ತಿದ್ದೀರಿ? ಒಂದು ದಿನಕ್ಕೆ ಎಷ್ಟು ಉತ್ಪತ್ತಿ ಆಗುತ್ತಿದೆ ಎಂದು ಹೇಳಲು ಆಗುವುದೇ?

ಶ್ರೀ ಎಸ್. ಡಿ. ಜಯರಾಂ:- ಚಿತ್ರದುರ್ಗದ ಇಂಗಳದಾಳ ಸಂಸ್ಕರಣ ಕೇಂದ್ರಕ್ಕೆ ಸಾಗಿಸಿ ಅಲ್ಲಿ ಮಾಡಲಾಗುತ್ತಿದೆ, ಅಜ್ಜೀನಹಳ್ಳಿಯಲ್ಲಿ ಏಕೆ ಮಾಡಲಾಗುತ್ತಿಲ್ಲವೆಂದರೆ, ಕರ್ನಾಟಕದ 10-12 ಜಾಗಗಳಲ್ಲಿ ಏನು ಚಿನ್ನದ ನಿಕ್ಷೇಪ ಸಿಗುತ್ತಿದೆ ಇವತ್ತು ಪ್ರಾಸ್ಪೆಕ್ಟಿವ್ ಲೈಸೆನ್ಸ್ ಕೊಟ್ಟು ಎಲ್ಲಾ ಒಂದೇ ಕಡೆಗೆ ತೆಗೆದುಕೊಂಡು ಹೋಗಿ ಮಾಡುವುದರಿಂದ 10ರಿಂದ 12 ಕೆಜಿಯಷ್ಟು ಸಂಸ್ಕರಣೆಯಾಗುತ್ತಿದೆ ಇನ್ನು ಮುಂದೆ ಕೂಡ ವ್ಯವಸ್ಥಿತವಾಗಿ ಮಾಡುವ ಸಂದರ್ಭದಲ್ಲಿ ಪ್ರಾಸ್ಪೆಕ್ಟಿವ್ ಲೈಸೆನ್ಸ್ ಸರ್ಕಾರದಿಂದ ದೊರೆತ ಮೇಲೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ:- ಅಧ್ಯಕ್ಷರೇ, ಏನಾಗಿದೆ ಹಟ್ಟಿ ಗೋಲ್ಡ್‌ಮೈನ್ಸ್ ಬಿಟ್ಟರೆ, ನೆಕ್ಸ್ಟ್ ಮ್ಯಾಫಿಟ್ ತರುವುದು ಅಜ್ಜೀನಹಳ್ಳಿಯಲ್ಲೇ, ನನ್ನ ಕ್ಷೇತ್ರದಲ್ಲಿ ಹೊಸದಾಗಿ ಸಿಕ್ಕಿರುವ ನಿಕ್ಷೇಪ. ಈಗ ನಮಗೆ ಗೊತ್ತಾಗಿರುವ ಪ್ರಕಾರ ಒಂದು ದಿನಕ್ಕೆ ಒಂದು ಕೆಜಿ ಉತ್ಪತ್ತಿ ಬರುತ್ತಿದೆ. ಇವತ್ತೇನು ಇಂಗಳದಾಳದಲ್ಲಿ ಸಂಸ್ಕರಣ ಘಟಕ ಮಾಡುತ್ತಿದ್ದೀರಿ ಬಹುಶಃ ಅದನ್ನು ಎಕ್ಸ್‌ಪ್ಯಾಂಡ್ ಮಾಡಲು ಹೋಗಬೇಡಿ. ಅಜ್ಜೀನಹಳ್ಳಿಯಲ್ಲೇ ಸಂಸ್ಕರಣ ಕೇಂದ್ರ ಸ್ಥಾಪನೆ ಮಾಡಿದರೆ ಕಾಸ್ಟ್ ಇನ್ನೂ ಕಡಿಮೆಯಾಗುತ್ತದೆ, ಸಾಗಣೆಯೂ ಉಳಿಯುತ್ತದೆ. ಅದಕ್ಕೆ ಎಷ್ಟು ಬೇಕೋ ಅಷ್ಟು ತಗೊಂಡುಹೋಗಿ, ಅಜ್ಜೀನಹಳ್ಳಿಯಲ್ಲಿ ಮಾಡುವುದರಿಂದ ಇನ್ನೂ ಹೆಚ್ಚು ಗೋಲ್ಡ್ ತೆಗೆಯಲು ಸಾಧ್ಯವಾಗುತ್ತದೆ. ರಾಜ್ಯದ ಹಿತದೃಷ್ಟಿಯಿಂದಲೂ ಇದರಿಂದ ಬಹಳ ಒಳ್ಳೆಯದಾಗುತ್ತದೆ. ಇವತ್ತು ಸ್ಥಳೀಯವಾಗಿ ಕೂಡ ಅದಕ್ಕೆ ಸಾಕಷ್ಟು ಪ್ರತಿಭಟನೆಯೂ ಬರುತ್ತಿದೆ. ಅಲ್ಲಿಂದ ಅದಿರು ತೆಗೆದೊಯ್ಯಬಾರದೆಂದು ರೈತರು ಕೂಡ ಶಪಿಮಾಡುತ್ತಿದ್ದಾರೆ. ಇಂಥ ವಿಷಯದಲ್ಲಿ ನಾವೆಲ್ಲ ಪ್ರವೇಶಿಸಿ ಅದಕ್ಕೆ ತೊಂದರೆಯಾಗದಂತೆ ಮಾಡಿದ್ದೇವೆ. ದಯಮಾಡಿ ನಾನು ಕೇಳುವುದಿಷ್ಟೆ, ಅದನ್ನು ಮುಂದೆ ಎಕ್ಸ್‌ಪ್ಯಾಂಡ್ ಮಾಡುವ ಕಾಲದಲ್ಲಿ ಅಜ್ಜೀನಹಳ್ಳಿಯಲ್ಲೇ ಮಾಡುತ್ತೇವೆಂಬ ಆಶ್ವಾಸನೆ ಕೊಡುವುದು ರಾಜ್ಯದ ಹಿತದೃಷ್ಟಿಯಿಂದಲೂ ಸೂಕ್ತ, ಒಳ್ಳೆಯದು.

ಶ್ರೀ ಎಸ್. ಡಿ. ಜಯರಾಂ:- ಹೆಚ್ಚು ನಿಕ್ಷೇಪ ಅಲ್ಲಿ ದೊರೆಯುವುದಾದರೆ ನಾವು ಅಲ್ಲೇ ಸಂಸ್ಕರಣ ಮಾಡುತ್ತೇವೆ.

ವಿಷಯ:- ದ. ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾ ತೆಡ್ಡುಗಳ ನಿರ್ಮಾಣ.

ಮುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 75 (415)